<u>**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಂದುವರಿದ ಮುಖ್ಯ ವಿಚಾರಣೆ :- ಶ್ರೀ ಹೆಚ್ ಎಸ್ ವಕೀಲರಿಂದ ಅರ್ಜಿದಾರರ ಪರವಾಗಿ**</u>

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಪ್ರಮಾಣ ಕರ್ತನ ಸಹಿಗಳು ನನ್ನದೇ ಇರುತ್ತವೆ ಮತ್ತು ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುತ್ತಿದ್ದೇನೆ.

2. ಭರಮಸಾಗರ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ 159/2023 ರಲ್ಲಿನ ಎಫ್.ಐ.ಆರ್, ಪ್ರಥಮ ಮಾಹಿತಿ, ಸ್ಥಳ ಪಂಚನಾಮೆ, ವಾಹನ ಪರಿಶೀಲನೆ ಪಂಚನಾಮೆ, ಐ.ಎಂ.ವಿ ವರದಿ, ಗಾಯದ ಪ್ರಮಾಣಪತ್ರ ಮತ್ತು ದೋಷಾರೋಪಣೆ ಪಟ್ಟಿ ಇವುಗಳ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ ನಿಪಿ-1 ರಿಂದ 7 ಎಂದು ಗುರುತಿಸಲಾಯಿತು.

3. ಬಿಡುಗಡೆ ಸಾರಾಂಶವನ್ನು ನಿಪಿ-8 , ಎರಡು ಕ್ಷ-ಕಿರಣಗಳನ್ನು ನಿಪಿ-9 ಮತ್ತು 3 ವೈದ್ಯಕೀಯ ಬಿಲ್ ಗಳನ್ನು ನಿಪಿ-10 ಎಂದು ಗುರುತಿಸಲಾಯಿತು.

4. ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡುವಂತೆ ಕೋರುತ್ತೇನೆ.

<u>**ಪಾಟೀ ಸವಾಲು- ಶ್ರೀ ಬಿ.ಎಂ.ಆರ್ ವಕೀಲರಿಂದ 2 ನೇ ಎದುರುದಾರರ ಪರವಾಗಿ.**</u>

5. ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಂದಿತಾ ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಆಕೆ ಹಾಸ್ಟೇಲ್ ನಲ್ಲಿ ಇರುತ್ತಾಳೆ. ಆಕೆ ಪಿ.ಯು.ಸಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ನಾನು ಮನೆ ಕೆಲಸ ಮಾಡುತ್ತೇನೆ. ಅಪಘಾತದ ಬಗ್ಗೆ ನನ್ನ ಅಣ್ಣ ದೂರನ್ನು ದಾಖಲಿಸಿರುತ್ತಾನೆ. ಅದರಲ್ಲಿ ನಾನು ಲ್ಯಾಬ್ ಟೆಕ್ನಿಷಿಯನ್ ಎಂದು ಕೆಲಸ ಮಾಡುತ್ತಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನನ್ನನ್ನು ಕೆಲಸದಿಂದ ತೆಗೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮೋಟಾರ್ ಸೈಕಲ್ ಚಾಲಕ ಆನಂದ ರೆಡ್ಡಿ ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಆನಂದ ರೆಡ್ಡಿರವರಿಗೆ ಈ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿ. ಅಪಘಾತವಾದ ದಿನ ಆನಂದ ರೆಡ್ಡಿ ಮೋಟಾರ್ ಸೈಕಲ್ ಚಾಲಕನೆ ಮಾಡುತ್ತಿದ್ದರು ಎಂದರೆ ಸರಿ. ಕಾರ್ ಮೋಟಾರ್ ಸೈಕಲ್ ಹಿಂಬದಿಯಲ್ಲಿ ಡಿಕ್ಕಿ ಮಾಡಿ ಅಪಘಾತ ಮಾಡಿರುತ್ತದೆ ಎಂದು ಅರ್ಜಿಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಆನಂದ ರೆಡ್ಡಿ ತಮ್ಮ ಹೇಳಿಕೆಯಲ್ಲಿ ಅವರು ಹಾಗೂ ಅರ್ಜಿ ದಾರರು ಇಬ್ಬರು ಮೋಟಾರ್ ಸೈಕಲ್ ನಿಂದ ಬಿದ್ದಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿ.

6. ಅಪಘಾತದಲ್ಲಿ ಆನಂದ ರೆಡ್ಡಿ ಅವರಿಗೆ ಗಾಯಗಳು ಆಗಿರುತ್ತವೆ ಎಂದು ತಮ್ಮ ಹೇಳಿಕೆಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ಅವರಿಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದವು. ಅವರಿಬ್ಬರು ಸಿರಿಗೆರೆ ಆಸ್ಪತ್ರೆಗೆ ದಾಖಲಾಗಿದ್ದರು. ಸಿರಿಗೆರೆ ಆಸ್ಪತ್ರೆಯಲ್ಲಿ ಅವರಿಬ್ಬರಿಗೂ ಚಿಕಿತ್ಸೆ ನೀಡಲಾಯಿತು. ಎಂ ಎಲ್ ಸಿ ಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಆನಂದ ರೆಡ್ಡಿಯವರು ಮೋಟಾರ್ ಸೈಕಲ್ ನಿಂದ ಅರ್ಜಿ ದಾರಳನ್ನು ಬೀಳಿಸಿ ಗಾಯಪಡಿಸಿದ್ದರಿಂದ ಎಂ ಎಲ್ ಸಿ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಗಾಯಗಳು ಆದಾರೆ ಕಡ್ಡಾಯವಗಿ ಎಂ ಎಲ್ ಸಿ ಮಾಡಲಾಗುತ್ತದೆ ಎಂದರೆ ಸರಿ. ಈ ಪ್ರಕರಣದ ಬಗ್ಗೆ ಸಿರೆಗೆ ಆಸ್ಪತ್ರೆಯಲ್ಲಿ ಎಂ ಎಲ್ ಸಿ ದಾಖಲಾಗಿರುವುದಿಲ್ಲ ಎಂದರೆ ಸರಿ. ಸಿರಿಗೆರೆ ಆಸ್ಪತ್ರೆಯ ಚಿಕಿತ್ಸೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

7. ನಾನು ದಾಖಲ್ಲಿಸಿರುವ ವೈದ್ಯಕೀಯ ದಾಖಲೆಗಳು ಖುಷಿ ಆಸ್ಪತ್ರೆಗೆ ಸೇರಿರುತ್ತವೆ ಎಂದರೆ ಸರಿ. ರೂ.4,00,000/- ವೈದ್ಯಕೀಯ ಖರ್ಚು ಅಗಿರುತ್ತದೆ ಎಂದು ಹೇಳಿದ್ದರು ಬರೀ ರೂ.17,000/- ವೈದ್ಯಕೀಯ ಬಿಲ್ ಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮುಂದುವರೆದ ಚಿಕಿತ್ಸೆ ಪಡೆದ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಕಾರ್ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆನಂದ ರೆಡ್ಡಿಯವರ ನಿಲರ್ಕ್ಷತನದಿಂದ ಅಪಘಾತವಾಗಿದ್ದು 2 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥ ನಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ